ರಾಷ್ಟ್ರೀಯ ಏಕತೆಯ ಸಮಸ್ಯೆಗಳು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ರವಿವರ್ಮಕುಮಾರ್

# ದೇಶದಲ್ಲಿ ಸಮಾನತೆಗೆ ಧಕ್ಕೆ: ಆತಂಕ

ಪ್ರಜಾವಾಣಿ ವಾರ್ತೆ

**ತುಮಕೂರು:** ಹಲವು ಜಾತಿ, ಧರ್ಮಗಳನ್ನು ಒಳಗೊಂಡು ಏಕತೆ ಕಾಪಾಡಿಕೊಂಡು ವಿಶ್ವಮಾನ್ಯವಾದ ಭಾರತದಲ್ಲಿ ಕಳೆದ ಐದು ವರ್ಷದಲ್ಲಿ ರಾಷ್ಟ್ರೀಯ ಭದ್ರತೆ, ಸಾರ್ವಭೌಮತ್ವ, ಸಮಾನತೆಯ ಆಶಯಗಳಿಗೆ ಧಕ್ಕೆ ತರುವ ಕೆಲಸ ನಡೆಯುತ್ತಿದೆ. ಅರಾಜಕತೆಯ ವಾತಾವರಣ ಸೃಷ್ಟಿಯಾಗಿ, ಜನ ನೆಮ್ಮದಿ ಕಳೆದುಕೊಳ್ಳುವಂತಾಗಿದೆ ಎಂದು ಹಿರಿಯ ವಕೀಲ ಪ್ರೊ. ರವಿವರ್ಮಕುಮಾರ್ ಆತಂಕ ವ್ಯಕ್ತಪಡಿಸಿದರು.

ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕೋಲ್ಕತದ ಇತಿಹಾಸ ಅಧ್ಯಯನ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ 52ನೇ ವಾರ್ಷಿಕ ಸಮ್ಮೇಳನದಲ್ಲಿ ರಾಷ್ಟ್ರೀಯ ಏಕತೆಯ ಸಮಸ್ಯೆಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಧರ್ಮದ ಆಚರಣೆ, ಪ್ರಚಾರಕ್ಕೆ ಅಡ್ಡಿ ಪಡಿಸುವುದೂ ಅಪರಾಧ ಎಂಬ ಕಾನೂನು ಇಲ್ಲಿ ಮಾತ್ರ ಇದೆ. ಇದೇ ನಿಯಮ ಕೆಲವರಿಗೆ ಧರ್ಮ ಪ್ರಸಾರದ ಹೆಸರಲ್ಲಿ ದೌರ್ಜನ್ಯ ನಡೆಸಲು ಅಸ್ತ್ರವಾಗಿದೆ. ಜಾತಿ, ಧರ್ಮದ ಹೆಸರಿನಲ್ಲಿ ಮತಾಂಧರನ್ನು ಸೃಷ್ಟಿಸುತ್ತಿದೆ. ತಪ್ಪು ಮಾಡಿದವರಿಗೆ ಹತ್ಯೆಯ ಶಿಕ್ಷೆ ನೀಡಿದರೆ, ಆಡಳಿತ ನಡೆಸುವವರೇ ಕಾನೂನು ಕೈಗೆತ್ತಿಕೊಳ್ಳುತ್ತಿದ್ದಾರೆ. ನ್ಯಾಯಾಧೀಶರಂತೆ ತೀರ್ಪು ಕೊಟ್ಟು, ಭಾರತೀಯ ದಂಡ ಸಂಹಿತೆಯನ್ನು ಕಗ್ಗೊಲೆ ಮಾಡಲಾಗಿದೆ. ಇಂಥ ವ್ಯವಸ್ಥೆಯಲ್ಲಿ ಪರಿವರ್ತನೆ ನಿರೀಕ್ಷಿಸಲು ಸಾಧ್ಯವಿಲ್ಲ. ಇದು ಭವಿಷ್ಯದ ಭಾರತಕ್ಕೆ ಅಪಾಯಕಾರಿ ಎಂದು ಆತಂಕ ವ್ಯಕ್ತಪಡಿಸಿದರು.


ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕೋಲ್ಕತದ ಇತಿಹಾಸ ಅಧ್ಯಯನ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ 52ನೇ ವಾರ್ಷಿಕ ಸಮ್ಮೇಳನದಲ್ಲಿ ಪ್ರೊ.ರವಿವರ್ಮಕುಮಾರ್ ಮಾತನಾಡಿದರು

### ಖರ್ಗೆ ಕಂಡರೆ ಮೋದಿಗೆ ಭಯ!

ರಾಜ್ಯದ ಅತ್ಯಂತ ಹಿಂದುಳಿದ ಲೋಕಸಭಾ ಕ್ಷೇತ್ರಕ್ಕೆ ದೇಶದ ಪ್ರಧಾನಿ ಭೇಟಿ ನೀಡಿ, ಒಬ್ಬ ಕಾಂಗ್ರೆಸ್ ಶಾಸಕನನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರು. ಒಬ್ಬ ದಲಿತ, ಸಮಾಜದಲ್ಲಿ ತುಳಿತಕ್ಕೆ ಒಳಗಾದ ಅಸ್ಪೃಶ್ಯ ವ್ಯಕ್ತಿ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಗುರಿಯಾಗಿ ಇಟ್ಟುಕೊಂಡು ಪ್ರಧಾನಿಯೊಬ್ಬರು ಅವರ ಕ್ಷೇತ್ರಕ್ಕೆ ಬಂದು ರಾಜಕೀಯ ಪ್ರಚಾರ ಮಾಡಿದರು. ಇದು ಆ ಖರ್ಗೆ ಅವರ ಸಾಮರ್ಥ್ಯ, ಅವರ ಮೇಲಿನ ಭಯವನ್ನು ತೋರುತ್ತದೆ ಎಂದು ಪ್ರೊ.ರವಿವರ್ಮಕುಮಾರ್ ಅಭಿಪ್ರಾಯಪಟ್ಟರು.

ಒಬ್ಬ ಪ್ರಧಾನಿ ಈ ಮಟ್ಟಕ್ಕೆ ಇಳಿಯುತ್ತಿರುವುದು ಸೋಜಿಗ ಮತ್ತು ಅವರ ದೌರ್ಬಲ್ಯವನ್ನು ಪ್ರದರ್ಶಿಸುತ್ತಿದೆ. ರಾಜಕೀಯ ಅಧಿಕಾರಕ್ಕಾಗಿ ಯಾವ ಮಟ್ಟಕ್ಕೂ ಇಳಿಯಬಲ್ಲರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಎಂದು ಪ್ರಧಾನಿ ಮೋದಿ ಅವರನ್ನು ಲೇವಡಿ ಮಾಡಿದರು.

ಎಲ್ಲರನ್ನೂ ಒಳಗೊಂಡ, ಎಲ್ಲರ ಹಿತವನ್ನು ಕಾಪಾಡುವ ಡಾ. ಬಿ.ಆರ್. ಅಂಬೇಡ್ಕರ್ ರಚಿಸಿದ ಭಾರತದ ಸಂವಿಧಾನ ಇಡೀ ಜಗತ್ತಿಗೆ ಮಾದರಿಯಾಗಿದೆ. ಬೇರೆ ರಾಷ್ಟ್ರಗಳನ್ನು ಇದನ್ನೇ ಮಾದರಿಯನ್ನಾಗಿ ಪಾಲನೆ ಮಾಡುತ್ತಿವೆ. ಆದರೆ ದೇಶದಲ್ಲಿ ಮಾತ್ರ ಇದಕ್ಕೆ ವ್ಯತಿರಿಕ್ತ ಪರಿಸ್ಥಿತಿ ನಿರ್ಮಾಣವಾಗಿದೆ. ದೇಶದ ಏಕತೆ ಕಾಪಾಡುವ ಸಂವಿಧಾನವನ್ನೇ ತಿದ್ದುವ, ತಿರುಚುವ ಹುನ್ನಾರ ನಡೆಯುತ್ತಿದೆ. ತಪ್ಪನ್ನು ತೋರಿಸಿದವರ ವಿರುದ್ಧ ದೇಶ ದ್ರೋಹ ಪಟ್ಟ ಕಟ್ಟಿ, ವಾಕ್ ಸ್ವಾತಂತ್ರ್ಯ ಹತ್ತಿಕ್ಕಲಾಗುತ್ತಿದೆ ಎಂದು ಆಪಾದಿಸಿದರು.

ಜನರಿಗೆ ಜಾತಿ, ಧರ್ಮಗಳನ್ನು ಮೀರಿದ ಸರ್ವ ಸಮಾನತೆಯ ಭಾರತದ ಅಗತ್ಯವಿದೆ. ಅಸ್ಪೃಶ್ಯತೆ ನಿವಾರಿಸಿ, ಶಿಕ್ಷಣ, ಸಾಮಾಜಿಕ ನ್ಯಾಯ, ರಾಜಕೀಯ ಮನ್ನಣೆ, ಸ್ತ್ರೀ ಸಮಾನತೆ ಬೇಕು. ದೇಶ ಎಷ್ಟೇ ಬೆಳೆದರೂ ಆರ್ಥಿಕ, ಸಾಮಾಜಿಕ ಭದ್ರತೆ ಒದಗಿಸುವ ಕೆಲಸವಾದಾಗ ಜನ ನೆಮ್ಮದಿಯಾಗಿರಲು ಸಾಧ್ಯ ಎಂದು ಹೇಳಿದರು.

> ಭಾರತ ಎಲ್ಲ ಧರ್ಮಗಳ ತವರೂರು. ಜಾತಿ, ಧರ್ಮದ ಆಚರಣೆಗೆ ಸಂವಿಧಾನದಲ್ಲಿ ಅವಕಾಶ ಇದೆ. ಅದು ದೇಶದ ಉನ್ನತಿಗೆ, ಸಾಮಾಜಿಕ ಭದ್ರತೆಗೆ ನೆರವಾಗಲಿ
> **ಪ್ರೊ. ಓ. ಅನಂತರಾಮಯ್ಯ**
> ವಿಶ್ರಾಂತ ಕುಲಪತಿ

ಇತಿಹಾಸ ಅಧ್ಯಯನ ಸಂಸ್ಥೆಯ ನಿರ್ದೇಶಕ ಚಕ್ರಬ್ರತ್ ಪಾಲಿಟ್ ಮಾತನಾಡಿ, ದೇಶದ ಏಕತೆಗೆ ಭಾಷೆ, ಧರ್ಮ ಮತ್ತು ಆರ್ಥಿಕ ಅಸಮಾನತೆಯ ವಿಚಾರಗಳು ಬಹುದೊಡ್ಡ ತೊಡಕಾಗಿ ಕಾಡುತ್ತಿವೆ. ಆದರೂ ಅವೆಲ್ಲಗಳನ್ನು ಸಂವಿಧಾನವು ಒಂದೇ ವೇದಿಕೆಯಲ್ಲಿ ತಂದು ಸಮನ್ವಯ ಸಾಧಿಸುವ ಪ್ರಯತ್ನ ಮಾಡಿದೆ. ವೈಯಕ್ತಿಕ ಹಿತಾಸಕ್ತಿ ತೊರೆದು ಏಕತೆ ಕಾಪಾಡುವುದು ಮುಖ್ಯವಾಗಿದೆ ಎಂದು ತಿಳಿಸಿದರು.

ವಿಶ್ರಾಂತ ಕುಲಪತಿ ಪ್ರೊ.ಓ. ಅನಂತರಾಮಯ್ಯ ಮಾತನಾಡಿದರು. ಕುಲಪತಿ ಪ್ರೊ. ವೈ.ಎಸ್. ಸಿದ್ದೇಗೌಡ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಕೆ.ವಿ. ಗಂಗಾನಾಯ್ಕ್, ಪ್ರೊ. ಎಲ್.ಪಿ. ರಾಜು, ಪ್ರೊ. ಯು.ಎಸ್. ಮೂರ್ತಿ ಭಾಗವಹಿಸಿದ್ದರು.




## ಲೋಕಸಭಾ ಚುನಾವಣೆಗೆ ರಿಪಬ್ಲಿಕನ್ ಸೇನಾ ಅಖಾಡಕ್ಕೆ

**ತುಮಕೂರು:** 'ನಾನು ಬರುವ ಲೋಕಸಭಾ ಚುನಾವಣೆಯಲ್ಲಿ 'ಕರ್ನಾಟಕ ರಿಪಬ್ಲಿಕನ್ ಸೇನಾ ಪಕ್ಷ'ದಿಂದ ತುಮಕೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೇನೆ' ಎಂದು ಜಿಲ್ಲಾ ಘಟಕದ ಅಧ್ಯಕ್ಷ ಅಯ್ಯೂಬ್ ಶರೀಫ್ ತಿಳಿಸಿದರು.

ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರದಿಂದ ನಮ್ಮ ಪಕ್ಷದ ಅಭ್ಯರ್ಥಿಗಳು ಸ್ಪರ್ಧೆ ಮಾಡಲಿದ್ದಾರೆ.


ಅಯ್ಯೂಬ್ ಶರೀಫ್

ಈಗಾಗಲೇ ಮಹಾರಾಷ್ಟ್ರ, ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ಶಾಸಕರಾಗಿದ್ದಾರೆ' ಎಂದು ಹೇಳಿದರು.

ಇದು ಬಡವರ ಹಾಗೂ ದಲಿತಪರ ಪಕ್ಷವಾಗಿದ್ದು, ಅಲ್ಪಸಂಖ್ಯಾತ, ದಲಿತರು ಒಂದಾಗಿ ಹೋರಾಟ ಮಾಡುತ್ತಿದ್ದೇವೆ. ಸಮಾಜಸೇವೆ ಮಾಡುವ ಆಸಕ್ತರಿಗೆ ಯಾವುದೇ ಜಾತಿ ಭೇದಭಾವ ಇಲ್ಲದೆ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಒಗ್ಗಟ್ಟಾಗಿ ಶ್ರಮಿಸಲಾಗುವುದು ಎಂದು ಹೇಳಿದರು.

ಚುನಾವಣೆ ಪ್ರಚಾರಕ್ಕಾಗಿ ರಾಷ್ಟ್ರೀಯ ಮುಖಂಡರಾದ ಪ್ರಕಾಶ್ ಅಂಬೇಡ್ಕರ್ ಅವರನ್ನು ಕರೆ ತರಲಾಗುವುದು ಎಂದರು.

ಮುಖಂಡರಾದ ಮೆಹಬೂಬ್ ಪಾಷ, ಅಯ್ಯೂಬ್ ಶೇಖ್, ಕರೀಂಉಲ್ಲಾ ಗೋಷ್ಠಿಯಲ್ಲಿದ್ದರು.

ಸಂಸದ ಎಸ್.ಪಿ.ಮುದ್ದಹನುಮೇಗೌಡ

## ದೈಹಿಕ ದೃಢತೆ ಕ್ರೀಡಾಪಟುವಿಗೆ ಆಯುಧ

**ಚಿಕ್ಕನಾಯಕನಹಳ್ಳಿ:** ಕ್ರೀಡಾಪಟುವಿಗೆ ದೇಹವೇ ಆಯುಧ. ದೈಹಿಕ ದೃಢತೆ ಕ್ರೀಡಾಪಟುವಿನ ಸಾಧನೆಗೆ ಅಡಿಗಲ್ಲು. ಆದ್ದರಿಂದ ಚಿಕ್ಕನಾಯಕನಹಳ್ಳಿ ಕ್ರೀಡಾಂಗಣಕ್ಕೆ ವಿಶೇಷ ಕಾಳಜಿ ವಹಿಸಿ ಜಿಮ್ ಅಳವಡಿಸಲು ಅನುದಾನ ನೀಡಿದ್ದೇನೆ ಎಂದು ಸಂಸದ ಎಸ್.ಪಿ.ಮುದ್ದಹನುಮೇಗೌಡ ಹೇಳಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣಕ್ಕೆ ಸಂಸದರ ಪ್ರಾದೇಶಿಕ ಅನುದಾನ ಅಡಿಯಲ್ಲಿ ₹ 5 ಲಕ್ಷ ಮೌಲ್ಯದ ಜಿಮ್ ಸಲಕರಣೆಗಳನ್ನು ಅಳವಡಿಸಲಾಗಿದ್ದು, ಸ್ಥಳೀಯ ಕ್ರೀಡಾಪಟುಗಳು ಮುದ್ದಹನುಮೇಗೌಡರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಿದ್ದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ತಾಲ್ಲೂಕಿಗೆ ವಿಶೇಷ ಕಾಳಜಿ ವಹಿಸಿ ಅನುದಾನ ನೀಡಿದ್ದೇನೆ. ಜಿಲ್ಲೆಯಲ್ಲೇ ಮೊದಲ ಬಾರಿಗೆ ಸಂಸದರ ಅನುದಾನದಲ್ಲಿ ತಾಲ್ಲೂಕು ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳಿಗಾಗಿ ಜಿಮ್ ಸೌಲಭ್ಯ ಒದಗಿಸಲಾಗಿದೆ. ಅಲ್ಲದೆ ವಾಕಿಂಗ್ ಪಾತ್‌ಗೆ ₹ 3 ಲಕ್ಷ ಒದಗಿಸಲಾಗಿದೆ. 2019ರ ಚುನಾವಣೆಯಲ್ಲಿ ಮರು ಆಯ್ಕೆಯಾದರೆ ಕ್ರೀಡಾಂಗಣ ಹಾಗೂ ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೆ ಮಲ್ಟಿಜಿಂ ಸೌಲಭ್ಯ ಒದಗಿಸಲಾಗುವುದು ಎಂದರು.


ಸಂಸದ ಎಸ್.ಪಿ.ಮುದ್ದಹನುಮೇಗೌಡ ಚಾಲನೆ ನೀಡಿ ಮಾತನಾಡಿದರು

'ಪ್ರತೀ ಗ್ರಾಮ ಪಂಚಾಯಿತಿಗೆ ₹ 9 ಲಕ್ಷ ಅನುದಾನ ಮಾತ್ರ ಲಭ್ಯವಿದ್ದು, ನನ್ನ ವ್ಯಾಪ್ತಿಯಲ್ಲಿ ಬರುವ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರದ ಅನುದಾನ ತಲುಪುವಂತೆ ಎಚ್ಚರ ವಹಿಸಿದ್ದೇನೆ' ಎಂದರು.

ನಾಗಕುಮಾರ್ ಚೌಕಿಮಠ್ ಮಾತನಾಡಿ, ತಾಲ್ಲೂಕು ಕ್ರೀಡಾಂಗಣದಲ್ಲಿ ಮಹಿಳೆಯರಿಗೆ ಅನುಕೂಲವಾಗಲು ಶೌಚಾಲಯದ ಅಗತ್ಯವಿದೆ. ಕ್ರೀಡಾಪಟುಗಳಿಗೆ ತರಬೇತುದಾರರು ಹಾಗೂ ಕ್ರೀಡಾಂಗಣಕ್ಕೆ ಉತ್ತಮ ಟ್ರಾಕ್ ಅವಶ್ಯಕತೆಯಿದ್ದು, ಸಂಸದರು ಈ ಬಗ್ಗೆ ಗಮನ ಹರಿಸಿ ಕ್ರೀಡಾಪಟುಗಳಿಗೆ ಅನುಕೂಲವಾಗುವ ರೀತಿ ಸೌಲಭ್ಯ ದೊರಕಿಸಿಕೊಡಬೇಕು ಎಂದರು.

ಈಲ್ಲಾ ಪಂಚಾಯಿತಿ ಸದಸ್ಯ ವೈ.ಸಿ. ಸಿದ್ದರಾಮಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಬಸವರಾಜು, ಉಪನ್ಯಾಸಕ ಶೈಲೇಂದ್ರಕುಮಾರ್, ಮಹಮದ್ ಹುಸೇನ್ (ಗುಂಡ), ಮಾಜಿ ಪುರಸಭಾಧ್ಯಕ್ಷ ಸಿ.ಡಿ.ಚಂದ್ರಶೇಖರ್, ಕಾಂಗ್ರೆಸ್ ಮುಖಂಡರಾದ ಕೆ.ಜಿ.ಕೃಷ್ಣೆಗೌಡ, ಬ್ರಹ್ಮಾನಂದ ಉಪಸ್ಥಿತರಿದ್ದರು.

### ನಗರದಲ್ಲಿ ಇಂದು

**ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್ಎಸ್), ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ):** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ಉಪಸ್ಥಿತಿ– ಕೆ.ವಿ. ಭಟ್, ಹರಿಣಿ. ಸ್ಥಳ– ಸರ್ಕಾರಿ ಪ್ರಾಥಮಿಕ ಶಾಲೆ ಆವರಣ, ಕೋತಿತೋಪು. ಬೆಳಿಗ್ಗೆ 10.30.

**ಪುಣ್ಯಕೋಟಿ ಪ್ರಕಾಶನ:** ಎ.ಬಿ. ಬಾಳಪ್ಪ ಅವರ 'ಚಿತ್ರಲತೆ' ಕೃತಿ ಲೋಕಾರ್ಪಣೆ. ಕೃತಿ ಲೋಕಾರ್ಪಣೆ– ಪ್ರೊ. ಬಿ.ಕರಿಯಣ್ಣ, ಅಧ್ಯಕ್ಷತೆ– ಪ್ರೊ.ಡಿ.ಎಸ್. ಮುನೀಂದ್ರಕುಮಾರ್. ಉಪಸ್ಥಿತಿ– ಪ್ರೊ.ಮ.ಲ.ನ.ಮೂರ್ತಿ. ಸ್ಥಳ– ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣ. ಬೆಳಿಗ್ಗೆ 11.

**ತುಮಕೂರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ:** 'ಜಿಎಸ್‌ಟಿ ಕುರಿತು ಸಂವಾದ ಕಾರ್ಯಕ್ರಮ'. ಅಧ್ಯಕ್ಷತೆ– ಎಚ್.ಜಿ.ಚಂದ್ರಶೇಖರ್. ಸಂವಾದ– ಬಸವರಾಜು, ಮಿರ್ಜಾ ಅಜ್ಮತ್ ಉಲ್ಲಾ, ಸುಭನ್ ಶರ್ಮ, ಬಿ.ಟಿ.ಮನೋಹರ್, ದೀಪಾಬಾಲಿ ದಾಸ್. ಉಪಸ್ಥಿತಿ– ಟಿ.ಜೆ. ಗಿರೀಶ್. ಸ್ಥಳ– ಎಂಪಿಎಂಸಿ ಯಾರ್ಡ್. ಮಧ್ಯಾಹ್ನ 3.

**ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ:** 'ವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭ'. ಸಾನ್ನಿಧ್ಯ– ಸಿದ್ಧಲಿಂಗ ಸ್ವಾಮೀಜಿ. ಬಹುಮಾನ ವಿತರಣೆ– ಕೆ.ರಾಕೇಶ್‌ಕುಮಾರ್. ಎಸ್. ಪಿ.ಮುದ್ದಹನುಮೇಗೌಡ, ಕೆ.ವಂಶಿಕೃಷ್ಣ, ಶುಭಾ ಕಲ್ಯಾಣ್, ಆರ್.ಮಾಲಾ, ಮಮತಾ, ಜಲಜಾಕ್ಷಿ. ಸ್ಥಳ– ಸಿದ್ಧಗಂಗಾ ಮಠ. ಸಂಜೆ 6.30

**ವಾಸವಿ ಸಂಘ:** 'ನನ್ನ ಕಲ್ಪನೆಯ ಭಾರತ: ಚಿಂತನ–ಮಂಥನ. ಸ್ಥಳ– ಕನ್ಯಕಾಪರಮೇಶ್ವರಿ ದೇವಸ್ಥಾನ, ಎಸ್. ಎಸ್.ಪುರಂ, 1 ನೇ ತಿರುವು. ಸಂಜೆ 6.30.

**ಅಲ್ಲಲ್ಲಿ ಏನೇನು?**

**ಕೆಸ್ತೂರು (ತುಮಕೂರು ತಾಲ್ಲೂಕು) ಯಲ್ಲಮ್ಮದೇವಿ ದೇವಾಲಯ ಮಂಡಳಿ:** ಯಲ್ಲಮ್ಮದೇವಿ ಜಾತ್ರ ಮಹೋತ್ಸವ. ಉಪಸ್ಥಿತಿ– ಜಿ.ಪರಮೇಶ್ವರ, ಎಸ್. ಪಿ.ಮುದ್ದಹನುಮೇಗೌಡ, ಪಿ.ಆರ್. ಸುಧಾಕರ್ ಲಾಲ್, ಹನುಮಂತರಾಯಪ್ಪ, ವಿ.ಎಸ್.ಮೂರ್ತಿ, ಟಿ.ಕೆ.ಲಕ್ಷ್ಮಿನರಸಯ್ಯ, ನೇತ್ರಾವತಿ ಸುರೇಶ್, ಗಂಗಾಧರಯ್ಯ. ಸ್ಥಳ– ಕೆಸ್ತೂರು, ಕೋರಾ ಹೋಬಳಿ, ತುಮಕೂರು. ಬೆಳಿಗ್ಗೆ 4.30 ರಿಂದ

## ಕಂಪ್ಯೂಟರ್ ಟ್ಯಾಲಿ ಉಚಿತ ತರಬೇತಿ

**ತುಮಕೂರು:** 'ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ', ನಿರುದ್ಯೋಗ ಯುವಕ– ಯುವತಿಯರಿಗಾಗಿ ವಸತಿಯುತ ಉಚಿತ 30 ದಿನಗಳ ಕಂಪ್ಯೂಟರ್ ಟ್ಯಾಲಿ ಮತ್ತು 45 ದಿನಗಳ ಕಂಪ್ಯೂಟರ್ ಡಿಟಿಪಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಕನ್ನಡ ಓದಲು ಹಾಗೂ ಬರೆಯಲು ಬರುವ 18 ರಿಂದ 45 ವಯೋಮಿತಿಯೊಳಗಿನ ಅಭ್ಯರ್ಥಿಗಳು ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದು. ಆಸಕ್ತರು ಮಾರ್ಚ್ 10ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.


ಮಾಹಿತಿಗಾಗಿ ಮೊ: 63610 48969 ಅನ್ನು ಸಂಪರ್ಕಿಸಬಹುದು.



ಸೂಚನೆ
ಬ್ಯಾಂಕ್ ಆಫ್ ಬರೋಡವು ತನ್ನ ಸೇವಾ ಶುಲ್ಕವನ್ನು ದಿನಾಂಕ 01.04.2019ರಿಂದ ಪರಿಷ್ಕರಿಸಲ್ಪಟ್ಟಿದೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಬ್ಯಾಂಕಿನ ವೆಬ್‌ಸೈಟ್ www.bankofbaroda.comನ–ಅನೌನ್ಸ್‌ಮೆಂಟ್ ವಿಭಾಗದಲ್ಲಿ ಭೇಟಿ ನೀಡಿ.
ಸ್ಥಳ : ಬರೋಡ
ದಿನಾಂಕ : 01–03–2019
ಮಹಾ ಪ್ರಬಂಧಕರು
ಆಪರೇಶನ್ ಮತ್ತು ಸೇವೆ
89/18-19)

BUSINESS PARTNER
INVESTORS
DISTRIBUTORS
FINANCIAL CONSULTANTS
ARE INVITED

A Leading Liquor Company of India is Looking for BEER State / District Business Partners/ Financial Consultant/Investors or Distributors in KARNATAKA.
Enter in new a Generation of Beer Business without the fear of every year License
Investment Starts from just Rs. 50 Lacs - Rs. 1.50 Cr.
• No Gestation Period
• Complete Risk Free Investment
• Handsome Return on Investment
For Financial Consultants - Attractive Remuneration
Email: whiskydistribution@gmail.com
Mobile: 9781422212




## ಎಂಪ್ರೆಸ್ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ರೂಂ

ಪ್ರಜಾವಾಣಿ ವಾರ್ತೆ

**ತುಮಕೂರು:** ಸ್ಮಾರ್ಟ್ ಸಿಟಿ ಯೋಜನೆಯಡಿ ನಗರದ ಎಂಪ್ರೆಸ್ ಶಾಲೆಯಲ್ಲಿ ನಿರ್ಮಾಣ ಮಾಡಿರುವ ಸ್ಮಾರ್ಟ್ ಕ್ಲಾಸ್‌ರೂಂನ್ನು ಶಾಸಕ ಜಿ.ಬಿ. ಜ್ಯೋತಿ ಗಣೇಶ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸ್ವತಂತ್ರ ಪೂರ್ವದಲ್ಲಿ ಸ್ಥಾಪನೆಯಾದ ಎಂಪ್ರೆಸ್ ಶಾಲೆಯು ನಗರದ ಹೃದಯ ಭಾಗದಲ್ಲಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಸ್ಮಾರ್ಟ್ ಕ್ಲಾಸ್ ನಿರ್ಮಾಣ ಮಾಡಿರುವುದು ಜಿಲ್ಲೆಯ ಎಲ್ಲಾ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ನಗರದ ಸರ್ಕಾರಿ ಪ್ರೌಢಶಾಲೆಗೆ ಹಾಗೂ ಎಂಪ್ರೆಸ್ ಶಾಲೆಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ತೆಗೆದುಕೊಂಡು ಸ್ಮಾರ್ಟ್ ಕ್ಲಾಸ್ ರೂಂ, ಗ್ರಂಥಾಲಯ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಿದ ಅಂತರರಾಷ್ಟ್ರೀಯ ಮಟ್ಟದ ಶಾಲೆಯನ್ನಾಗಿ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು.


ಸ್ಮಾರ್ಟ್ ಸಿಟಿ ಯೋಜನೆಯಡಿ ನಗರದ ಎಂಪ್ರೆಸ್ ಶಾಲೆಯಲ್ಲಿ ನಿರ್ಮಾಣ ಮಾಡಿರುವ ಸ್ಮಾರ್ಟ್ ಕ್ಲಾಸ್‌ರೂಂನ್ನು ಶಾಸಕ ಜಿ.ಬಿ.ಜ್ಯೋತಿ ಗಣೇಶ್ ಉದ್ಘಾಟಿಸಿದರು

ಸ್ಮಾರ್ಟ್ ಸಿಟಿ ಯೋಜನೆಯಡಿ ಹೆಚ್ಚಿನ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಇನ್ನಷ್ಟು ಅನುದಾನ ನೀಡುವಂತೆ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿ, 'ನಿಮ್ಮ ಪಠ್ಯ ಕ್ರಮಕ್ಕೆ ತಕ್ಕಂತೆ ಡಿಜಿಟಲ್ ಪಠ್ಯಕ್ರಮವನ್ನು ರೂಪಿಸಲಾಗಿದೆ. ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಂಡು ಸ್ಮಾರ್ಟ್ ಆಗಿ ಹೊರಹೊಮ್ಮಬೇಕು ಎಂದರು.

ಜಿಲ್ಲಾಧಿಕಾರಿ ಕೆ.ರಾಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಂಶಿಕೃಷ್ಣ, ಸ್ಮಾರ್ಟ್ ಸಿಟಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಂಗಸ್ವಾಮಿ, ಅಜಯ್, ಎಂಪ್ರೆಸ್ ಕಾಲೇಜಿನ ಶಿಕ್ಷಕ ಸಿದ್ದಲಿಂಗಪ್ಪ ಹಾಜರಿದ್ದರು.

ಸುಧಾ– ಮಯೂರ ಓದಿರಿ

## ನಿತ್ಯ ₹ 249 ಸಂಬಳಕ್ಕೆ ಅರ್ಚಕರ ಆಗ್ರಹ

**ಬೆಂಗಳೂರು:** ಮುಜರಾಯಿ ದೇವಾಲಯಗಳ ಅರ್ಚಕರಿಗೆ ನೀಡುತ್ತಿರುವ ತಸ್ತೀಕ್ ಮೊತ್ತವನ್ನು ತಿಂಗಳಿಗೆ ₹ 5 ಸಾವಿರಕ್ಕೆ ಏರಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ 'ಕರ್ನಾಟಕ ಧಾರ್ಮಿಕ ದತ್ತಿ ದೇವಾಲಯಗಳ ಅರ್ಚಕರ ಮತ್ತು ಆಗಮಿಕರ ಸಂಘ'ದ ನೂರಾರು ಅರ್ಚಕರು ಮತ್ತು ಆಗಮಿಕರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಗೂ ಮುನ್ನ ಮೌರ್ಯ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.


'ರಾಜ್ಯದಲ್ಲಿರುವ ಸಿ ದರ್ಜೆಯ 34 ಸಾವಿರ ಮುಜರಾಯಿ ದೇವಾಲಯಗಳಿಗೆ ಪೂಜಾ ಕೈಂಕರ್ಯ ಸೇರಿ ಹಲವು ಖರ್ಚುಗಳಿಗಾಗಿ ಸರ್ಕಾರವು ತಸ್ತೀಕ್ ಹಣ ಮಾಸಿಕ ₹ 4 ಸಾವಿರ ನೀಡುತ್ತಿದೆ. ಅದರಲ್ಲಿ ಅರ್ಚಕರ ಕೈ ಸೇರುತ್ತಿರುವುದು ₹ 1,400 ಮಾತ್ರ. ಇದರಲ್ಲಿ ಜೀವನ ನಡೆಸಲು ಸಾಧ್ಯವೇ? ಮಕ್ಕಳಿಗೆ ಶಿಕ್ಷಣ ನೀಡುವುದು ಹೇಗೆ' ಎಂದು ಅಳಲು ತೋಡಿಕೊಂಡರು.


ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಧಾರ್ಮಿಕ ದತ್ತಿ ದೇವಾಲಯಗಳ ಅರ್ಚಕರ ಮತ್ತು ಆಗಮಿಕರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸಂಘದ ಅಧ್ಯಕ್ಷ ಜಾನಕಿರಾಮ್, 'ಬಜೆಟ್‌ನಲ್ಲಿ ಮುಸ್ಲಿಂ ಸಮುದಾಯಕ್ಕೆ ₹ 410 ಕೋಟಿ, ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗೆ ₹ 200 ಕೋಟಿ ಅನುದಾನ ನೀಡಲಾಗಿದೆ. ಹಿಂದೂ ಮಠಗಳಿಗೆ ಕೇವಲ ₹ 60 ಕೋಟಿ ಮೀಸಲಿರಿಸಲಾಗಿದೆ. ಈ ಮೂಲಕ ಹಿಂದೂ ದೇವಾಲಯ ಮತ್ತು ಅರ್ಚಕರಿಗೆ ಸರ್ಕಾರ ಅನ್ಯಾಯ ಮಾಡಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಕೇಂದ್ರ ಸರ್ಕಾರ ನಿಗದಿಪಡಿಸಿರುವ ಪ್ರಕಾರ ದಿನದ ಸಂಭಾವನೆ ₹ 249 ನೀಡಬೇಕು. ಆದರೆ, ಅದೂ ಸಿಗುತ್ತಿಲ್ಲ. ಕೆಲವು ದೇವಾಲಯಗಳು ಜೀರ್ಣೋದ್ಧಾರವಾಗದೆ ದುಸ್ಥಿತಿಯಲ್ಲಿವೆ. ವಿದ್ಯುತ್ ಸಂಪರ್ಕ, ಶೌಚಾಲಯ ಮತ್ತು ನೀರಿನ ವ್ಯವಸ್ಥೆ ಸೇರಿದಂತೆ ವಿವಿಧ ಮೂಲ ಸೌಕರ್ಯಗಳ ಕೊರತೆ ಇದೆ. ನಮ್ಮ ಸಮಸ್ಯೆಗಳನ್ನು ಬಗೆಹರಿಸಬೇಕು' ಎಂದು ಒತ್ತಾಯಿಸಿದರು.

ಪ್ರಧಾನ ಕಾರ್ಯದರ್ಶಿ ಶ್ರೀನಿವಾಸಮೂರ್ತಿ, 'ಗ್ರಾಮಸ್ಥರು ಅನಧಿಕೃತವಾಗಿ ಸಮಿತಿಗಳನ್ನು ರಚಿಸಿ ಮುಜರಾಯಿ ದೇವಾಲಯಗಳಲ್ಲಿ ಹುಂಡಿಗಳನ್ನು ಇಟ್ಟುಕೊಂಡು ಅರ್ಚಕರಿಗೆ ಕಿರುಕುಳ ಕೊಡುತ್ತಿದ್ದಾರೆ. ಸಮಿತಿಗಳನ್ನು ವಜಾಗೊಳಿಸಿ ಹುಂಡಿಗಳನ್ನು ಸರ್ಕಾರವು ತನ್ನ ಸುಪರ್ದಿಗೆ ಪಡೆಯಬೇಕು. ಅರ್ಚಕರು ಮರಣ ಹೊಂದಿದರೆ ಸಾಮಾನ್ಯ ಸಂಗ್ರಹಣ ನಿಧಿಯಿಂದ ಅವರ ಕುಟುಂಬಕ್ಕೆ ₹ 2 ಲಕ್ಷ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.



ಮಹಿಳಾ ದಿನಾಚರಣೆಯ ಶುಭಾಶಯಗಳು



ಕಾಲ್ ಸೆಂಟರ್ ಸೇವೆಗಾಗಿ (022) 6827 6827
ಡೌನ್‌ಲೋಡ್ ಮಾಡಿ ಎಲ್ಐಸಿ ಮೊಬೈಲ್ ಆ್ಯಪ್ "MyLIC"
"LICHELP <POLICY NO>" ನ್ನು ಟೈಪ್ ಮಾಡಿ 9222492224 ಸಂಖ್ಯೆಗೆ ಎಸ್.ಎಂ.ಎಸ್ ಕಳುಹಿಸಿ
ಸಂದರ್ಶಿಸಿ: www.licindia.in; Follow us : LIC India Forever
ಐಆರ್‌ಡಿಎಐ ನೊಂದಣಿ ಸಂ. 512
ಮೋಸ/ವಂಚಿಸುವ ದೂರವಾಣಿ ಕರೆಗಳ ಬಗ್ಗೆ ಎಚ್ಚರಿಕೆಯಿಂದಿರಿ!
ಐಆರ್‌ಡಿಎಐ ಸಂಸ್ಥೆಯು ಇನ್ಶೂರನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಂಗಳ ಹೂಡಿಕೆಯಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಿಲ್ಲ. ಸಾರ್ವಜನಿಕರಿಗೆ ಐಆರ್‌ಡಿಎಐ ಸಂಸ್ಥೆಯ ಹೆಸರಿನಲ್ಲಿ ದೂರವಾಣಿ ಕರೆಗಳು ಬಂದಲ್ಲಿ ತಕ್ಷಣವೇ ಪೊಲೀಸ್ ಠಾಣೆಗೆ ದೂರು ನೀಡಲು ವಿನಂತಿಸಲಾಗಿದೆ.
ಜೀವನದೊಂದಿಗೂ, ಜೀವನದ ನಂತರವೂ.
LIC/AR/18-19/44/KAN